ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್

ಭಾ.ಕೃ.ಅ.ಪ-ಕೃಷಿ ವಿಜ್ಞಾನ ಕೇಂದ್ರ, ದ.ಕ., ಮಂಗಳೂರು


# ಮೀನಿನ ಗೊಬ್ಬರ (ದ್ರವ)

**ಡಾ. ಚೇತನ್ ಎನ್. ಹಾಗೂ ಡಾ. ರಮೇಶ ಟಿ. ಜೆ.**

*ವಿಜ್ಞಾನಿಗಳು, ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು, ದಕ್ಷಿಣ ಕನ್ನಡ*

ಕರುಳು, ತಲೆ, ಚರ್ಮ ಅಥವಾ ಜನರು ತಿನ್ನದ ಮೀನಿನ ಯಾವುದೇ ಭಾಗವನ್ನು ಹುದುಗಿಸುವ ಅಥವಾ ಮಿಶ್ರಗೊಬ್ಬರ ಮಾಡುವ ಮೂಲಕ ಸಾವಯವ ಗೊಬ್ಬರವನ್ನಾಗಿ ಮಾಡಬಹುದು. ಮೀನಿನ ತ್ಯಾಜ್ಯವು ಸಾರಜನಕ, ರಂಜಕ, ಕ್ಯಾಲ್ಸಿಯಂ ಮತ್ತು ವಿಟಮಿನ್‌ಗಳಿಂದ ಸಮೃದ್ಧವಾಗಿದೆ. ಮೀನಿನ ಗೊಬ್ಬರವನ್ನು ಬಳಸುವುದರಿಂದ, ನಾವು ಮಣ್ಣಿನಲ್ಲಿ ಉತ್ತಮ ಸೂಕ್ಷ್ಮಜೀವಿಗಳನ್ನು ಹೆಚ್ಚಿಸಬಹುದು, ಆದರಿಂದ ಮಣ್ಣು ಆರೋಗ್ಯಕರವಾಗಿರುತ್ತದೆ ಮತ್ತು ಪೋಷಕಾಂಶಗಳು ಸಸ್ಯಗಳಿಗೆ ಹೆಚ್ಚು ಸುಲಭವಾಗಿ ಲಭ್ಯವಾಗುತ್ತವೆ. ಇದು ಬೆಳೆಗಳು ಬಲವಾದ ಬೇರುಗಳು ಮತ್ತು ಎಲೆಗಳನ್ನು ಬೆಳೆಯುವಂತೆ ಮಾಡುತ್ತದೆ, ಕೀಟಗಳು ಮತ್ತು ರೋಗಗಳಿಗೆ ನಿರೋಧಕ ಶಕ್ತಿಯನ್ನು ಹೊಂದಿದ್ದು, ಹೆಚ್ಚು ಇಳುವರಿ ನೀಡುತ್ತದೆ. ಮೀನಿನ ಗೊಬ್ಬರವು ಬೆಳೆಯ ಗುಣಮಟ್ಟವನ್ನು ಸುಧಾರಿಸುತ್ತದೆ.









## ದ್ರವ ಮೀನಿನ ಗೊಬ್ಬರವನ್ನು ತಯಾರಿಸುವ ವಿಧಾನ

- ಮೀನಿನ ತ್ಯಾಜ್ಯವನ್ನು ಸಣ್ಣ ತುಂಡುಗಳಾಗಿ ಕತ್ತರಿಸಬೇಕು
- ಮೀನಿನ ತ್ಯಾಜ್ಯಕ್ಕೆ ಹಸಿ ಬೆಲ್ಲವನ್ನು ಸೇರಿಸಿ (1:1 ಅನುಪಾತ)
- ಎರಡನ್ನೂ ಸಂಪೂರ್ಣವಾಗಿ ಮಿಶ್ರಣ ಮಾಡಿ
- ಮಿಶ್ರಣವನ್ನು ಗಾಳಿಯಾಡದ ಪ್ಲಾಸ್ಟಿಕ್ ಡ್ರಮ್/ ಬಕೆಟ್‌ನಲ್ಲಿ ಸಂಗ್ರಹಿಸಿ
- ಡ್ರಮ್ಮನ್ನು ನೆರಳಿನಲ್ಲಿ ಇರಿಸಿ ಮತ್ತು ದಿನಕ್ಕೆ ಒಮ್ಮೆ ಮರದ ಕೋಲಿನಿಂದ ದ್ರಾವಣವನ್ನು ಚೆನ್ನಾಗಿ ಕಲಕಬೇಕು
- 4 ವಾರಗಳ ನಂತರ ಬಟ್ಟೆಯನ್ನು ಬಳಸಿ ದ್ರಾವಣವನ್ನು ಶೋಧಿಸಬೇಕು
- ದ್ರವರೂಪದ ಮೀನಿನ ಗೊಬ್ಬರವನ್ನು ಗಾಳಿಯಾಡದ ಡ್ರಮ್‌ನಲ್ಲಿ 3 ತಿಂಗಳ ಕಾಲ ಸಂಗ್ರಹಿಸಬಹುದು.
- ದ್ರಾವಣವನ್ನು 1:10ರ ಪ್ರಮಾಣದಲ್ಲಿ ನೀರಿನೊಂದಿಗೆ ಬೆರೆಸಿ ಬೆಳೆಗಳಿಗೆ ಸಿಂಪಡಿಸಬಹುದು

**2023**